ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧೀಕಾರಿಗಳು,

**ಕಿತ್ತೂರ ಇವರ ನ್ಯಾಯಾಲಯದಲ್ಲಿ.**

**ಸಿ.ಸಿ 567/2023**

**ಸಾಕ್ಷಿದಾರರ ಹೆಸರು** ಬಾಳಪ್ಪ ಶಂಕರ ಕೋಲಕಾರ **CW – 02**
**PW - 02**
**ವಯಸ್ಸು** **36** ವರ್ಷ ಪ್ರ.ವ.ಬೋ ದಿನಾಂಕಃ **22.01.2026**
**ಉದ್ಯೋಗ** ಕೂಲಿ ಕೆಲಸ
**ವಾಸ** ಚಿಕ್ಕಮುನವಳ್ಳಿ

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-</u>**

ಚಾಸಾ 1 ರವರ ಪರಿಚಯ ಇದೆ. ಚಾಸ 3 ರವರ ಪರಿಚಯ ಇದೆ. ಆರೋಪಿತನ ಪರಿಚಯ ಸಹ ಇರುತ್ತದೆ.

2022 ರ ಒಂದು ದಿನ ಮದ್ಯ ರಾತ್ರಿ ಇಟಗಿ ಕ್ರಾಸ ಹತ್ತಿರ ಅಪಘಾತ ಆಗಿರುತ್ತದೆ. ಸದರಿ ಆಪಘಾತದಲ್ಲಿ ಬಾಳಪ್ಪ ಮತ್ತು ಕರೆಪ್ಪ ಎಂಬುವವರು ಮರಣ ಹೊಂದಿರುತ್ತಾರೆ. ನಂತರ ಕಿತ್ತೂರಿನ ಸರ್ಕಾರ ಆಸ್ಪತ್ರೆಗೆ ಬಂದು ಆಸ್ಪತ್ರೆಗೆ ಬಂದಿರುತ್ತೇನೆ. ನಂತರ ಆಸ್ಪತ್ರೆಗೆ ಪೊಲೀಸರು ಬಂದಾಗ ನಮಗೆ ಕರೆದು ಶವ ಪಂಚನಾಮೆಗೆ ಪಂಚರಾಗಲು ಕೋರಿಕೊಂಡಿರುತ್ತಾರೆ. ನಂತರ ಮೃತ ಕರೆಪ್ಪನ ಶವವನ್ನು ಅವರ ಸಂಬಂಧಿಕರು ನೋಡಿ ಗುರುತಿಸಿದಂತೆ ಅವನ ಶವದ ಪಂಚನಾಮೆಯನ್ನು ಹಾಗೂ ನಂತರ ಬಾಳಪ್ಪನ ಶವವನ್ನು ಅವನ ಸಂಬಂಧಿಕರು ನೋಡಿ ಗುರುತಿಸಿದಂತೆ ಪೊಲೀಸರು ಬಾಳಪ್ಪನ ಶವ ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ಎರಡು ಶವಗಳ ಶವ ನಿಪಿ 2 ಮತ್ತು 3 ರಂತೆ  ಬೆಳಿಗ್ಗೆ 08 ರಿಂದ 10 ಗಂಟೆಯವರೆಗೆ ಎರಡು ಶವ

ಪಂಚಾನಾಮೆಗಳನ್ನು ಮಾಡಿರುತ್ತಾರೆ. ಸಾಕ್ಷಿಯು ನಿಪಿ 2 ಮತ್ತು 3 ರಲ್ಲಿರುವ ತಮ್ಮ ಸಹಿಗಳನ್ನು ನಿಪಿ **2(ಎ) ಮತ್ತು 3(ಎ)** ಗುರುತಿಸಲಾಯಿತು.

ನಂತರ ಅಲ್ಲಿಂದ ಪೊಲೀಸರು ನಮ್ಮನ್ನು ಎಂ.ಕೆ.ಹುಬ್ಬಳ್ಳಿ ಠಾಣೆಗೆ ಹೋಗಿ ಠಾಣಾ ಆವರಣದಲ್ಲಿದ್ದ ಅಪಘಾತದಲ್ಲಿ ಭಾಗಿಯಾದ ವಾಹನವನ್ನು ಪೊಲೀಸರು ನಮ್ಮ ಸಮಕ್ಷಮ ವಾಹನತಡೆ ಪಂಚನಾಮೆ ಮೂಲಕ ತಡೆ ಹಿಡಿದಿರುತ್ತಾರೆ. ಸದರಿ ವಾಹನ ಪಂಚನಾಮೆಗಿಂತ ಮುಂಚೆ ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ನಂತರ ಎಂ.ಕೆ.ಹುಬ್ಬಳ್ಳಿ ಠಾಣೆಗೆ ಹೋಗಿರುತ್ತೇವೆ. ಸಾಕ್ಷಿಯು ನಿಪಿ 8 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿಯ ಸಹಿಯನ್ನು **ನಿಪಿ 8 (ಎ)**ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 9 ರಿಂದ 13 ರಂತೆ ಇರುವ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

(ಈ ವೇಳೆಗೆ ಏಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೇಳಿಕೊಂಡಿರುವರು, ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಏಪಿಪಿಯವರಿಂದ:**

ನಿಪಿ 2 ಮತ್ತು 3 ರಂತೆ ಶವ ಪಂಚನಾಮೆಗಳನ್ನು ಮಾಡಿದ ನಂತರ ಪೊಲೀಸರು ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ನಂತರ ಸ್ಥಳದಲ್ಲಿದ್ದ ಚಾಸಾ 1 ರವರು ತೋರಿಸಿದಂತೆ ಪೊಲೀಸರು ನಮ್ಮ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ನಿಜ.

ನಂತರ ಸ್ಥಳದಲ್ಲಿ ಕಾರಗಾಡಿಯ ಪೈಬರ ಚೂರಗಳನ್ನು ಚಾಸಾ 1 ರವರು ತೋರಿಸಿದಂತೆ ಸದರಿ ಚೂರುಗಳನ್ನು ಪೊಲೀಸರು ನಮ್ಮ ಸಮಕ್ಷಮ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 12 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆದಿರುತ್ತಾರೆ ಎಂದರೆ ನಿಜ. ನಂತರ ಪೊಲೀಸರು ಅಲ್ಲಿಂದ ಎಂ.ಕೆ.ಹುಬ್ಬಳ್ಳಿ ಪೊಲೀಸ ಉಪಠಾಣೆಗೆ ಕರೆದುಕೊಂಡು ಹೋಗಿ ಠಾಣಾ ಆವರಣದಲ್ಲಿದ್ದ ಅಪಘಾತದಲ್ಲಿ ಭಾಗಿಯಾದ ಕಾರ ನಂ. ಕೆಎ 25 ಎಂ 9201 ಎಂದು ಇದ್ದು ಅದನ್ನು ನಮ್ಮ ಸಮಕ್ಷಮ ವಾಹನ ತಡೆ ಪಂಚನಾಮೆಯ ಮೂಲಕ ತಡೆ ಹಿಡಿದಿರುತ್ತಾರೆ ಎಂದರೆ ನಿಜ. ಸದರಿ ವಾಹನ ತಡೆ ಪಂಚನಾಮೆಯನ್ನು 12.30 ರಿಂದ 01.30 ರವರೆಗೆ ಮಾಡಿ ಅದನ್ನು ಸ್ಥಳದಲ್ಲಿಯೇ ನಮಗೆ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ನಿಜ. ಅದೇ ಸಮಯದಲ್ಲಿ ಛಾಯಾಚಿತ್ರಗಳನ್ನು ಸಹ ತೆಗೆದಿರುತ್ತಾರೆ ಎಂದರೆ ನಿಜ.

**ಈ ಹಂತದಲ್ಲಿ ಏಪಿಪಿ ರವರು ಪ್ರಕರಣದಲ್ಲಿ ಜಪ್ತಾದ ಕಾರಿನ ಪೈಬರ ತುಂಡುಗಳನ್ನು ಗುರುತಿಸುವ ಸಲುವಾಗಿ ಮುಂದಿನ ಪಾಟಿ ಸವಾಲಿಗೆ ಸಮಯವನ್ನು ಕೋರಿದ್ದು, ಆಲಿಸಿ ಸಮಯ ನೀಡಿ ಮುಂದೂಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು**).**

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**